RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ Volume 148	ಬೆಂಗಳೂರು, ಗುರುವಾರ, ನವೆಂಬರ್ ೭, ೨೦೧೩ (ಕಾರ್ತೀಕ ೧೬, ಶಕ ವರ್ಷ ೧೯೩೫) Bangalore, Thursday, November 7, 2013 (Karthika 16, Shaka Varsha 1935)	ಸಂಚಿಕೆ ೪೪ Issue 44

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಛ ನ್ಯಾಯಾಲಯವು ಮಾಡಿದ ನಿಯಮಗಳು

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸಂಖ್ಯೆ: ಪಸಂಮೀ 68 ಪಪಾಯೋ 2011,ಬೆಂಗಳೂರು, ದಿನಾಂಕ: 15.02.2013.

ಅಧಿಸೂಚನೆ

ಕರ್ನಾಟಕ ಗೋವಧೆಯ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣೆ (ಗೋಸೇವಾ ಆಯೋಗದ ರಚನೆ) ನಿಯಮಗಳು 2012ರ ನಿಯಮ 3(2)(ii)ರಡಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ 11 ಜನರನ್ನು ಕರ್ನಾಟಕ ರಾಜ್ಯ ಗೋಸೇವಾ ಆಯೋಗದ ಸರ್ಕಾರೇತರ ಸದಸ್ಯರನ್ನಾಗಿ (ಅಧ್ಯಕ್ಷರನ್ನೊಳಗೊಂಡಂತೆ) ಈ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಲಾಗಿದೆ;

ಕ್ರ. ಸಂ.	ನಾಮನಿರ್ದೇಶಿತರ ಹೆಸರು ಮತ್ತು ವಿಳಾಸ	ಹುದ್ದೆ
1.	ಶ್ರೀ ಎಂ.ಬಿ. ಪುರಾಣಿಕ್ "ಸುದರ್ಶನ", ವಾದಿರಾಜನಗರ, ಅಳಕೆ, ಮಂಗಳೂರು–575003.	ಅಧ್ಯಕ್ಷರು
2.	ಡಾ|| ಎಸ್.ಕೆ. ಮಿತ್ತಲ್ "ಶ್ರೀ ಕುಂಜ್", 19–1, 3ನೇ ಬ್ಲಾಕ್, 5ನೇ ಮುಖ್ಯರಸ್ತೆ, ಜೈಲಕ್ಷ್ಮೀಪುರಂ, ಮೈಸೂರು–12.	ಸದಸ್ಯರು
3.	ಶ್ರೀ ಎಸ್. ಶಿವರಾಮು ಚಿಕ್ಕಬಳ್ಳಿ ಪೋಸ್ಟ್ & ಗ್ರಾಮ, ಬಸವಾಳ ಹೋಬಳಿ, ಮಂಡ್ಯ ತಾಲ್ಲೂಕು & ಜಿಲ್ಲೆ –571446.	ಸದಸ್ಯರು
4.	ಶ್ರೀ ಬಿ.ಎಸ್. ಮಂಜುನಾಥಸ್ವಾಮಿ # 113, "ಬೆನಕ ಕೃಪ", 5ನೇ ಕ್ರಾಸ್, ಶಾರದಾನಗರ, ಜಿ.ಕೆ.ವಿ.ಕೆ ಪೋಸ್ಟ್, ಬೆಂಗಳೂರು–560065.	ಸದಸ್ಯರು
5.	ಶ್ರೀ ಉತ್ತಮ್‌ಚಂದ್ ಚಾಜೆದ್ "ರತ್ನಾಕಲಶ ಅಸ್ಟ್ರೋಜೆಮ್ಸ್", # 302, ಕಾಮರಾಜ ರಸ್ತೆ, ಕಾರ್ಪೋರೇಷನ್ ಬ್ಯಾಂಕ್ ಎದುರು, ಬೆಂಗಳೂರು–560042.	ಸದಸ್ಯರು
6.	ಶ್ರೀ ಉತ್ತಮ್‌ಚಂದ್ ಬುಗದ್ 80 ಅಡಿ ಟ್ಯಾಂಕ್ ಬಂಡ್ ರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560095.	ಸದಸ್ಯರು

ಕ್ರ. ಸಂ.	ನಾಮನಿರ್ದೇಶಿತರ ಹೆಸರು ಮತ್ತು ವಿಳಾಸ	ಹುದ್ದೆ
7.	ಶ್ರೀ ದಯಾನಂದ ಸ್ವಾಮೀಜಿ # 274, ಬಸವಧರ್ಮ ಜ್ಞಾನಪೀಠ, ಮಾರುತಿ ನಗರ, 9ನೇ ಕ್ರಾಸ್, ಮಹದೇಶ್ವರ ನಗರ ಮುಖ್ಯರಸ್ತೆ, ವಿಶ್ವನೀಡಂ ಪೋಸ್ಟ್, ಬೆಂಗಳೂರು–560095.	ಸದಸ್ಯರು
8.	ಶ್ರೀ ಧರ್ಮಪ್ರಸಾದ್ ಚಾರ್ಟರ್ಡ್ ಅಕೌಂಟೆಂಟ್, ಚೆನ್ನಗಿರಿ ರಸ್ತೆ, ಮೇಯರ್ ರಂಗಪ್ಪ ವೃತ್ತ, ಭದ್ರಾವತಿ, ಶಿವಮೊಗ್ಗ ಜಿಲ್ಲೆ–577301.	ಸದಸ್ಯರು
9.	ಶ್ರೀಮತಿ ಭಾರತಿ ಪಾಟೀಲ್, ಅಕ್ಷಯ ಗೋಸೇವಾ ಸಮಿತಿ, ಹುಬ್ಬಳ್ಳಿ.	ಸದಸ್ಯರು
10.	ಶ್ರೀ ಶ್ರೀನಿವಾಸ ಹನುಮಂತ ಬಿರಾದಾರ ಪಟೇಲ್ ವಂಟಗೋಡಿ ಪೋಸ್ಟ್, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ–587373.	ಸದಸ್ಯರು
11.	ಶ್ರೀ ಶಿವಪ್ಪ ಕರಪ್ಪ ಕಡಪಟ್ಟಿ ನಂದಗೋಕುಲ ಗೋಶಾಲಾ, ಸರ್ಕಾರಿ ಆಸ್ಪತ್ರೆ ಹಿಂದೆ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸರಸಾ
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ [ಪಶುಸಂಗೋಪನೆ]

ANIMAL HUSBANDRY & FISHERIES SECRETARIAT

NO. AHF 68 AHP 2011 BANGALORE, DATED 15.02.2013.

NOTIFICATION

In exercise of the powers conferred by sub rule 2(ii) of rule 3 of the Karnataka Prevention of Cow Slaughter and Cattle Preservation (Constitution of Goseva Ayog) Rules 2012, Government of Karnataka hereby nominate the following 11 persons as the Non-Official members (including the Chairperson) of the Karnataka State Goseva Ayog from the date of this Notification and until further orders;

Sl. No.	Name and address of the nominated members	Designation
1.	Shri. M.B. Puranik "Sudarshana", Vadirajanagara, Alake, Mangalore – 575003.	Chairperson
2.	Dr. S.K.Mitthal "Shri Kunj", 19-1, 3rd Block, 5th Main, Jailakshmipuram, Mysore-12.	Member
3.	Shri. S.Shivaramu Chikkaballi Post & Village, Basavala Hobli, Mandya Taluk & District –571466.	Member
4.	Shri. B.S. Manjunath Swamy # 113, "Benaka Krupa", 5th Cross, Sharadanagara, G.K.V.K. Post, Bangalore-560065.	Member
5.	Shri. Uttamchand Chajed "Ratnakalasha Astrogems", # 302, Kamaraja Raod, Opp. Corporation Bank, Bangalore-560042.	Member

Sl. No.	Name and address of the nominated members	Designation
6.	Shri. Uttamchand Bugad 80 Ft. Tank Bund Road, 6th Block, Koramangala, Bangalore-560042.	Member
7.	Shri. Dayananda Swamiji # 274, Basavadharma Jnanapeeta, Maruthinagara, 9th Cross, Mahadeshwara Nagar Main Road, Vishwaneedam Post, Bangalore-560095.	Member
8.	Shri. Dharmaprasad Chartered Accountant, Chennagiri Road, Mayor Rangappa Circle, Bhadravathi, Shivamogga District-577301.	Member
9.	Smt. Baharathi Patil Akshaya Goseva Samiti, Hubli.	Member
10.	Shri. Srinivasa Hanumantha Biradara Patel Vantagodi Post, Mudhola Taluk, Bagalakote District –587373.	Member
11.	Shri. Shivappa Karappa Kadapatti Nandagokula Goshala, Behind Government Hospital, Jamakhandi Taluk, Bagalakote District.	Member

By Order and in the name of Governor of Karnataka

SARASA

Under Secretary to Government

Animal Husbandry & Fisheries Department (Animal Husbandry)

PR – 521
SC - 100

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸಂಖ್ಯೆ: ಪಸಂಮೀ 68 ಪಪಾಯೋ 2011 (ಭಾಗ–1) ಬೆಂಗಳೂರು, ದಿನಾಂಕ 22.08.2013.

ಅಧಿಸೂಚನೆ

ಕರ್ನಾಟಕ ಗೋವಧೆಯ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣೆ (ಗೋಸೇವಾ ಆಯೋಗದ ರಚನೆ) ನಿಯಮಗಳು 2012ರಡಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆ ಸಂಖ್ಯೆ: ಪಸಂಮೀ 68 ಪಪಾಯೋ 2011, ದಿನಾಂಕ 15.02.2013ರಲ್ಲಿ ನೇಮಕ ಮಾಡಲಾದ ಕರ್ನಾಟಕ ರಾಜ್ಯ ಗೋಸೇವಾ ಆಯೋಗದ ಸರ್ಕಾರೇತರ ಸದಸ್ಯರ (ಅಧ್ಯಕ್ಷರನ್ನೊಳಗೊಂಡಂತೆ) ನೇಮಕಾತಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸರಸಾ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ [ಪಶುಸಂಗೋಪನೆ]

PR – 522
SC - 100

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸಂಖ್ಯೆ:ಪಸಂಮೀ 191 ಮೀಇಯೋ 2013, ಬೆಂಗಳೂರು, ದಿನಾಂಕ:19–09–2013

ಅಧಿಸೂಚನೆ

ವಿವಿಧ ಆಯಿಲ್ ಕಂಪೆನಿಗಳಿಗೆ ಡೀಸೆಲ್ ಬಂಕ್‌ವಾರು ಅವು ಸೇವೆ ನೀಡುವ ದೋಣಿಗಳ ಸಂಖ್ಯೆ ಹಾಗೂ ಅಶ್ವಶಕ್ತಿಯನ್ನು ಪರಿಗಣಿಸಿ ಡೀಸೆಲ್‌ನ ಮಾಸಿಕ ಕೋಟಾ ನಿಗದಿ ಮಾಡಿ ಮೀನುಗಾರಿಕೆ ನಿರ್ದೇಶನಾಲಯದಿಂದ ಪ್ರತಿ ತಿಂಗಳು ನೀಡಲಾಗುತ್ತಿತ್ತು. ಈ ಅಧಿಕಾರವನ್ನು ಈ ಕೆಳಗಿನ ಷರತ್ತಿಗೊಳಪಟ್ಟು ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು/ಕಾರವಾರ ಇವರುಗಳಿಗೆ ಪ್ರತ್ಯಾಯೋಜಿಸಲಾಗಿದೆ.

(1) ಮೀನುಗಾರಿಕೆ ಉಪ ನಿರ್ದೇಶಕರು ಪ್ರತಿ ತಿಂಗಳು ಬಿಡುಗಡೆ ಮಾಡಿದ ಮತ್ತು ಬಳಸಿದ ಡೀಸೆಲ್ ಪ್ರಮಾಣವನ್ನು ಮುಂದಿನ ತಿಂಗಳ 10ನೇ ತಾರೀಖಿನೊಳಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು.

(2) ವಿವಿಧ ಯಾಂತ್ರೀಕೃತ ದೋಣಿಗಳಿಗೆ ನಿಗದಿಪಡಿಸಿರುವ ಮಿತಿಯೊಳಗೆ ಡೀಸೆಲ್ ಸರಬರಾಜು ಮಾಡುವುದು.

(3) ಸಾಧ್ಯತಾ ಪತ್ರ ಪಡೆಯದೆ ನಿರ್ಮಿಸಿದ ಹಾಗೂ ಇಲಾಖೆಯಲ್ಲಿ ನೋಂದಾಯಿಸದ ದೋಣಿಗಳಿಗೆ ಡೀಸೆಲ್ ವಿತರಣೆಯನ್ನು ಮಾಡತಕ್ಕದ್ದಲ್ಲ.

(4) 20 ಮೀ.ಗಿಂತ ಹೆಚ್ಚಿನ ಉದ್ದದ ಮೀನುಗಾರಿಕಾ ದೋಣಿಗಳಿಗೆ ಡೀಸೆಲ್ ವಿತರಣೆಯನ್ನು ಮಾಡತಕ್ಕದ್ದಲ್ಲ.

(5) ಆಯಾ ತಿಂಗಳಿನಲ್ಲಿ ಪ್ರತಿ ದೋಣಿಗಳಿಗೆ ವಿತರಿಸಿದ ಡೀಸೆಲ್ ಪ್ರಮಾಣ, ಹಿಡಿದ ಮೀನಿನ ಪ್ರಮಾಣ, ಹಾಗೂ ಟ್ರಿಪ್ ಶೀಟ್‌ಗಳನ್ನು ಡೀಸೆಲ್ ಬಂಕ್‌ಗಳಿಂದ ಪಡೆದುಕೊಂಡೇ ಮುಂದಿನ ತಿಂಗಳಿನ ಡೀಸೆಲ್ ಬಿಡುಗಡೆ ಮಾಡತಕ್ಕದ್ದು.

(6) ಮೇಲ್ಕಂಡ ಷರತ್ತುಗಳೊಂದಿಗೆ ಮುಂದೆ ಮೀನುಗಾರಿಕೆ ನಿರ್ದೇಶಕರು/ಸರ್ಕಾರ ಯಾವುದಾದರೂ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿದಲ್ಲಿ ಅವುಗಳನ್ನು ಸಹ ಪಾಲಿಸತಕ್ಕದ್ದು.

ಉಳಿದಂತೆ ಬೇಡಿಕೆಗೆ ತಕ್ಕಂತೆ ಜಿಲ್ಲಾವಾರು ಮಾಸಿಕ ಹಂಚಿಕೆ ಗುರಿಯನ್ನು ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು ಮತ್ತು ಕಾರವಾರ ಇವರಿಗೆ ನಿಗದಿಪಡಿಸಿ ನೀಡುವ ಅಧಿಕಾರವನ್ನು ಮೀನುಗಾರಿಕೆ ನಿರ್ದೇಶಕರೇ ನಿರ್ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ.ಜಯಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

PR – 524

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸಂಖ್ಯೆ:ಪಸಂಮೀ 97 ಮೀಇಯೋ 2013, ಬೆಂಗಳೂರು, ದಿನಾಂಕ:19–09–2013

ಅಧಿಸೂಚನೆ

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ (ನಿ), ಮಂಗಳೂರು ಇದರ ಮೆಮೊರ್‍ಯಾಂಡಮ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ನಿಯಮಾವಳಿಗಳ ನಿಯಮ 23 (ii)ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ನಿಗಮದ ನಿರ್ದೇಶಕರ ಮಂಡಳಿಯ ಶ್ರೀ ಭಾಸ್ಕರ ವೆಂಕಟರಮಣ ಮೊಗೇರ, ಅಳ್ವೆಕೋಡಿ, ಭಟ್ಕಳ ತಾಲ್ಲೂಕು ಇವರನ್ನು ಅಧಿಕಾರೇತರ ನಿರ್ದೇಶಕರ ಸ್ಥಾನದಿಂದ ಈ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ.ಜಯಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

PR – 523

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು–5